## ಮನೆಯಲ್ಲೇ ಮಾಡಿ ಪ್ರಯೋಗ

■ ಆರ್.ಎಸ್. ಪಾಟೀಲ್

# ಬೆಳಕು ಸರಳ ರೇಖೆಯಲ್ಲಿ ಚಲಿಸುತ್ತದೆ

ಸರಳ ರೇಖೆಯಲ್ಲಿ ಚಲಿಸುವುದೇ ಬೆಳಕಿನ ಮೂಲ ಗುಣ. ಬೆಳಕಿನ ಈ ಗುಣವನ್ನು ಕಣ್ಣಾರೆ ಕಂಡು ಖಾತರಿಪಡಿಸಿಕೊಳ್ಳುವ ಸರಳ ಪ್ರಯೋಗ ಇದು.

ಬೇಕಾಗುವ ಸಾಮಗ್ರಿಗಳು: ಸೋಡಾ ಕೊಳವೆ (ಸ್ಟ್ರಾ), ಮೇಣದ ಬತ್ತಿ, ಬೆಂಕಿ ಪೊಟ್ಟಣ.

ಪ್ರಯೋಗ ವಿಧಾನ: ಸ್ಟೂಲ್ ಇಲ್ಲವೆ ಮೇಜಿನ ಮೇಲೆ ಮೇಣದ ಬತ್ತಿ ನಿಲ್ಲಿಸಿ.

ಈಗ ಮೇಣದ ಬತ್ತಿ ಹೊತ್ತಿಸಿಕೊಳ್ಳಿರಿ

ಸೋಡಾ ಕೊಳವೆಯಿಂದ ಮೇಣದ ಬತ್ತಿಯ ಜ್ವಾಲೆಯನ್ನು ಒಂದು ಬದಿಯಿಂದ ನೋಡಿ ಜ್ವಾಲೆ ಸ್ಪಷ್ಟವಾಗಿ ಕಾಣಿಸುತ್ತದೆ ಅಲ್ಲವೇ?

ಈಗ ಅದೇ ಕೊಳವೆಯನ್ನು ಮಧ್ಯದಲ್ಲಿ ಸ್ವಲ್ಪ ಬಾಗಿಸಿ ಜ್ವಾಲೆಯನ್ನು ನೋಡಲು ಪ್ರಯತ್ನಿಸಿ.

ಜ್ವಾಲೆ ಕಾಣಿಸುತ್ತದೆಯೇ?

ಇಲ್ಲ ಇಲ್ಲ ಎಂದೇ ಉತ್ತರಿಸುತ್ತೀರಿ. ಏಕೆ ಇದು ಸಾಧ್ಯ ಇಲ್ಲ?

ಏಕೆಂದರೆ, ಬೆಳಕು ಸರಳರೇಖೆ (ನೇರ)ವಾಗಿ ಚಲಿಸುತ್ತದೆ. ಅದಕ್ಕೆ ವಕ್ರರೇಖೆಯಲ್ಲೂ ಚಲಿಸಲು ಸಾಧ್ಯ ಇದ್ದಿದ್ದರೆ ಮಾತ್ರ ಬಾಗಿದ ಕೊಳವೆಯಲ್ಲೂ ಜ್ವಾಲೆಯನ್ನು ಕಾಣಬಹುದಿತ್ತು. ಅಂದರೆ ಬೆಳಕಿನ ಸರಳರೇಖಾ ಪ್ರಸರಣವನ್ನು ಈ ಪ್ರಯೋಗದಿಂದ ಸಾಧರಪಡಿಸಬಹುದು.



# ರಜೆಯು ಬಂದಿತು

■ ಎನ್. ಶೈಲಜಾ ಹಾಸನ



ಶಿಲ್ಪಾ ಕಬ್ಬಿಣಕಂತಿ

ಬಂದಿತು ಬಂದಿತು ರಜೆಯು ಬಂದಿತು
ತಂದಿತು ತಂದಿತು ಹರ್ಷವ ತಂದಿತು
ಓದುವ ಬರೆಯುವ ಟೆನ್ಷನ್ ಹೋಯಿತು
ಆಡುವ ಕುಣಿಯುವ ಹುಮ್ಮಸ್ಸು ಉಕ್ಕಿತು

ಶಾಲೆಯ ಪಾಠಕೆ ಟಾಟಾಬೈ ಹೇಳುವೆ
ಊರಿಗೆ ಕುಣಿಯುತ ನಲಿಯುತ ಹೋಗುವೆ
ಅಜ್ಜಿಯ ಮಡಿಲಲಿ ಖುಷಿಯಲಿ ಆಡುವೆ
ಅಜ್ಜನು ಹೇಳುವ ಕಥೆಯನು ಕೇಳುವೆ

ಮಾವಿನ ಮರಕ್ಕೆ ಜೋಕಾಲಿ ಕಟ್ಟುವೆ
ಹಗ್ಗವ ಜೀಕಿ ಜೀಕಿ ಸಂತಸ ನಡುವೆ
ಹಕ್ಕಿಯ ಚಿಲಿಪಿಲಿ ನಾದವಾ ಕೇಳುವೆ
ನಾನೂ ಕೀ ಕೀ ಎಂದು ಉಲಿಯುವೆ

ಗೌರಿ ಕರುವನು ಬಯಲಲಿ ಮೇಯಿಸುವೆ
ಗಂಗೆಯ ಮೊಲೆಗೆ ಬಾಯಿನು ಹಾಕುವೆ
ಸವಿ ಹಾಲುನು ಹೀರುವ ಮಗುವೆ ಆಗುವೆ
ಕೊಟ್ಟಿಗೆ ಬಾಚಿ ಬಳಿದು ಗೌಳಿಗನಾಗುವೆ

ಅಜ್ಜನ ಊರಿನ ಬಣ್ಣದ ತೇರನು ಎಳೆವೆ
ಹೂವು ಧವನವ ತೇರಿಗೆ ತೂರಿ ನಮಿಪೆವೆ
ಬೆಂಡು ಬತ್ತಾಸು ಕಡ್ಲೆಪುರಿ ಕೊಳ್ಳುವೆ
ಅಜ್ಜ ಕೊಡಿಸಿದ ಬಣ್ಣದ ಕನ್ನಡಕ ಹಾಕುವೆ

ಜಾತ್ರೆಯ ನಾಟಕ ರಾತ್ರಿಯಿಡಿ ನೋಡುವೆ
ಭೀಮ ಅರ್ಜುನರ ಮಾತನು ಕಲಿವೆ
ಪಂಚೆಯ ಸುತ್ತಿ ಬಿಲ್ಲನು ಹಿಡಿದು
ಕಿರೀಟ ಧರಿಸಿ ನಾನೂ ನಾಟಕ ಆಡುವೆ